


ವಿದ್ಯಾರ್ಥಿಯಾಗಿದ್ದ ನಾನು ಕುಣಿಯುತ್ತಿದ್ದೆ ಎಂದರೆ ನೀವು ನಂಬಲೇಬೇಕು. ಅದನ್ನು ನಿರೂಪಿಸಲು ಸಾಕ್ಷಿ ಸಮೇತ ವಾದ ಮಂಡಿಸುವ ಹೊಣೆ ನನ್ನದು. ಯಾವುದಾದರೂ ರೋಗ ಭ್ರಮಿಸಿಕೊಂಡು, ನೆಪ ಒಡ್ಡಿ, ಕೊನೆಗೆ ತರಚಿದ ಚೂರು ಗಾಯವನ್ನೇ ಮನೆಯಲ್ಲಿ ಸೂರು ಬಿದ್ದಂತೆ ಬಿಂಬಿಸಿ, ಈಗಿನ ವಾಹಿನಿಗಳ ರೀತಿ, ದವಾಖಾನೆಗೆ ಓಡುವುದು ನನ್ನ ಚಾಳಿ.

ಪುರಾಣಿಕ ಡಾಕ್ಟರ ದವಾಖಾನೆಯ ಆಕರ್ಷಣೆಗೆ ಅವರ ಕೈಗುಣ ಕಾರಣ ಎಂಬುದು ಇಡೀ ಊರಿನ ನಂಬಿಕೆ. ಆ ಕೈಗುಣದ ಪ್ರಭಾವ ಎಷ್ಟು ಗಾಢವೆಂದರೆ–ಕೆಲವರಿಗೆ, ವಿಶೇಷವಾಗಿ ಮುಸಲ್ಮಾನ ರೋಗಿಗಳಿಗೆ ವೈದ್ಯರು ಚೀಟಿಯಲ್ಲಿ ಗೀಚಿಕೊಡುವ ಗುಳಿಗೆಗಳ ಹೆಸರು ಸಮಾಧಾನ ತರುವುದಿಲ್ಲ; "ಡಾಕ್ಟರ್ ಸಾಬ್, ತುಮಾರ ಹಾತ್ ಸೆ ಗೋಲಿ ದೇ" ಎಂದು ಕೈಯಾರೆ ಎರಡು ಗುಳಿಗೆಗಳನ್ನು ಸಾಂಕೇತಿಕವಾಗಿ ಪಡೆಯುತ್ತಾರೆ.

ಇಷ್ಟೆಲ್ಲಾ ಹೇಳಿದ್ದನ್ನು ಕೇಳಿ ಗೊಂದಲಗೊಳ್ಳಬೇಡಿ. ನ್ಯಾಯಾಧೀಶರಿಗೆ ಕನ್ವಿನ್ಸ್ ಮಾಡಲು